ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ

ಸಿಸಿ **37/2019**

ಪಿಡಬ್ಲ್ಯುಃ **2**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಥಾಮ್ಸನ್ |
| ತಂದೆಯ ಹೆಸರು | ಃ | ಮತ್ತಾಯಿ |
| ವಯಸ್ಸು | ಃ | **40** ವರ್ಷ |
| ಉದ್ಯೋಗ | ಃ | ಹೆಚ್.ಸಿ **160**, ಮಣಿಪಾಲ ಪೋಲೀಸ್ ಠಾಣೆ |
| ವಾಸಸ್ಥಳ | ಃ | ಮಣಿಪಾಲ |

ಸಿಆರ್ ಪಿಸಿ ಕಲಂಃ 299 ರಡಿಯಲ್ಲಿ ವಿಚಾರಣೆಃ

ದಿಃ **23.12.2022** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ **08.08.2019** ರಿಂದ ಈಗಲೂ ಮಣಿಪಾಲ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯವು ಸಿಸಿ ನಂಬ್ರ **37/2019** ರಲ್ಲಿ ಆಪಾದಿತ ಗಂಗಾಧರ, ತಂದೆ ಮಾದಪ್ಪ, ಎಂಬುವವರ ವಿರುದ್ದ ಹೊರಡಿಸಿದ್ದ ಪ್ರೊಕ್ಲಮೇಶನನ್ನು ಹೆಚ್ **160** ಆದ ನಾನು ಸ್ವೀಕರಿಸಿಕೊಂಡು ದಿಃ **18.09.2022** ರಂದು ದೊಡ್ಡ ಬಳ್ಳಾಪುರ ತಾಲೂಕು, ತೂಬುಗೆರೆ ಗ್ರಾಮದ ಮಾದಪ್ಪ ಎಂಬುವವರ ಮಗನಾದ ಗಂಗಾಧರ ಎಂಬುವವರ ವಿಳಾಸಕ್ಕೆ ಹೋಗಿ ಆಪಾದಿತ ಗಂಗಾಧರನ ಬಗ್ಗೆ ವಿಚಾರಿಸಿದ್ದು ಯಾವುದೇ ಮಾಹಿತಿ ದೊರೆಯಲಿಲ್ಲ, ನಂತರ ಇಸ್ತಿಹಾರಿನ ಒಂದು ಪ್ರತಿಯನ್ನು ತೂಬುಗೆರೆ ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡಿಗೆ ಲಗತ್ತಿಸಿದೆನು. ಇನ್ನೊಂದು ಪ್ರತಿಯನ್ನು ತೂಬುಗೆರೆ ಬಸ್ ನಿಲ್ದಾಣದ ಗೋಡೆಗೆ ಅಂಟಿಸಿದೆನು, ಇನ್ನೊಂದು ಪ್ರತಿಯನ್ನು ದೊಡ್ಡ ಬಳ್ಳಾಪುರ ತಾಲೂಕು ಕಚೇರಿಯ ನೋಟೀಸು ಬೋರ್ಡಿಗೆ ಲಗತ್ತಿಸಿದೆನು. ನಂತರ ತೂಬುಗೆರೆ, ಕರ್ನಾಲ್, ಮುತ್ತುಗದ ಹಳ್ಳಿ, ಹಿರೇನಗುಡ್ಡದ ಹಳ್ಳಿ ಮೊದಲಾದ ಸ್ಥಳಗಳಲ್ಲಿ ಜಾಹೀರಾತಿನ ಪ್ರಕಟಣೆಯನ್ನು ಏರು ಧ್ವನಿಯಲ್ಲಿ ಕೂಗಿ ಹೇಳಿದೆನು ಆಪಾದಿತ ಗಂಗಾಧರ ಕಂಡುಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ

ದೂರವಾಣಿ ಸಂಖ್ಯೆಯನ್ನು ನೀಡಿರುತ್ತೇನೆ. ಮಹಜರನ್ನು **18.09.2022** ರಂದು **10.15** ಗಂಟೆಯಿಂದ **11.20** ಗಂಟೆಯವರೆಗೆ ಸ್ಥಳದಲ್ಲೇ ಬರೆಯಲಾಯಿತು. ಸ್ಥಳೀಯರಾದ ರಮೇಶ್ ಕುಮಾರ್ ಹಾಗೂ ಲಿಂಗಪ್ಪ ಎಂಬುವವರ ಸಹಿಯನ್ನು ಮಹಜರಿಗೆ ಪಡೆದುಕೊಂಡೆನು.

ನಾನು ನ್ಯಾಯಾಲಯದಿಂದ ಪಡೆದ ಪ್ರೊಕ್ಲಮೇಶನ್ ಆದೇಶ ಎಂದು ಗುರುತಿಸಿದ್ದು ನಿ.ಪಿ**-3,** ಪಂಚನಾಮೆ ಎಂದು ಗುರುತಿಸಿದ್ದು ಅದನ್ನು ನಿ.ಪಿ**-4,** ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ**-4**(ಎ) ಎಂದು ಗುರುತಿಸಲಾಯಿತು.

ನಂತರ ಮತ್ತೊಬ್ಬ ಆರೋಪಿ ನಾರಾಯಣ ಸ್ವಾಮಿ, ತಂದೆ ನರಸಪ್ಪ, ವಾಸ ಡೀಪಾಳ್ಯ, ಗೌರಿಬಿದನೂರು ತಾಲೂಕು, ಚಿಕ್ಕಬಳ್ಳಾಪುರ ಎಂಬುವವರ ಬಗ್ಗೆ ವಿಳಾಸಕ್ಕೆ ಹೋಗಿ ವಿಚಾರಿಸಿದಾಗ ಸದ್ರಿಯವರು **10-15** ವರ್ಷಗಳಿಂದ ವಿಳಾಸ ಬಿಟ್ಟು ಹೋಗಿದ್ದು ಎಲ್ಲಿರುತ್ತಾರೋ ಗೊತ್ತಿರುವುದಿಲ್ಲ ಎಂಬುದಾಗಿ ನೆರೆಕರೆಯವರು ಮತ್ತು ಸಾರ್ವಜನಿಕರು ತಿಳಿಸಿರುತ್ತಾರೆ. ನಂತರ ಜಾಹೀರಾತಿನ ಒಂದು ಪ್ರತಿಯನ್ನು ಆಪಾದಿತ ನಾರಾಯಣ ಸ್ವಾಮಿಯ ಮನೆಯ ಗೋಡೆಗೆ, ಇನ್ನೊಂದು ಪ್ರತಿಯನ್ನು ಡೀಪಾಳ್ಯ ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡಿಗೆ, ಮತ್ತೊಂದು ಪ್ರತಿಯನ್ನು ಗೌರಿಬಿದನೂರು ತಾಲೂಕು ಕಚೇರಿಯ ನೋಟೀಸ್ ಬೋರ್ಡಿಗೆ ಅಂಟಿಸಿರುತ್ತೇನೆ. ನಂತರ ಡೀಪಾಳ್ಯ, ಗೊಲ್ಲರಕಾಲನಿ, ಮರಿಗಮ್ಮ ದೇವಸ್ಥಾನ ವಠಾರ ಇಲ್ಲಿ ಧ್ವನಿವರ್ಧಕದಲ್ಲಿ ಜಾಹೀರಾತಿನ ಪ್ರಕಟಣೆಯನ್ನು ಓದಿ ಹೇಳಿದೆನು, ಆಪಾದಿತ ನಾರಾಯಣ ಸ್ವಾಮಿ ಕಂಡುಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ ದೂರವಾಣಿ ಸಂಖ್ಯೆಯನ್ನು ನೀಡಿರುತ್ತೇನೆ. ಈ ಮಹಜರನ್ನು ದಿ: **18.09.2022** ರಂದು **12.00** ಗಂಟೆಯಿಂದ **12.40** ಗಂಟೆಯವರೆಗೆ ಸ್ಥಳದಲ್ಲೇ ತಯಾರಿಸಿರುತ್ತೇನೆ, ಸದ್ರಿ ಪ್ರೊಕ್ಲಮೇಶನ್ ಆದೇಶ ಎಂದು ಗುರುತಿಸಿದ್ದು ನಿ.ಪಿ**-5,** ಪಂಚನಾಮೆ ಎಂದು ಗುರುತಿಸಿದ್ದು ಅದನ್ನು ನಿ.ಪಿ**-6,** ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ**-6**(ಎ) ಎಂದು ಗುರುತಿಸಲಾಯಿತು.

ನಂತರ ಇನ್ನೊಬ್ಬ ಆರೋಪಿಯಜಾದ ಶ್ರೀನಿವಾಸ ಎನ್.ಸಿ, ತಂದೆ ದಿ. ಚಿಕ್ಕಪ್ಪಯ್ಯ, ನಕ್ಕಲಹಳ್ಳಿ, ಗೌರಿಬಿದನೂರು ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಅವರ ವಿಳಾಸಕ್ಕೆ ಹೋಗಿ ಸದ್ರಿಯವರು ವಿಳಾಸದಲ್ಲಿ ಗೈರು ಹಾಜರಿದ್ದು ನಂತರ ಸದ್ರಿಯವರ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ನೆರೆಕರೆಯವರಲ್ಲಿ ಕೇಳಲಾಗಿ ಯಾವುದೇ ಮಾಹಿತಿ ಗೊತ್ತಿರಲಿಲ್ಲ. ನಂತರ ಜಾಹೀರಾತಿನ ಒಂದು ಪ್ರತಿಯನ್ನು ನಕ್ಕಲಹಳ್ಳಿ ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡಿಗೆ, ಇನ್ನೊಂದು ಪ್ರತಿಯನ್ನು ನಗರಗೆರೆ ಬಸ್ ನಿಲ್ದಾಣದ ಗೋಡೆಗೆ ಹಾಗೂ ಮತ್ತೊಂದು ಪ್ರತಿಯನ್ನು ಗೌರಿ ಬಿದನೂರು ತಾಲೂಕು ಕಚೇರಿಯ ನೋಟೀಸ್ ಬೋರ್ಡಿಗೆ ಲಗತ್ತಿಸಿರುತ್ತೇನೆ. ನಂತರ ನಕ್ಕಲಹಳ್ಳಿ, ನರಸಾಪುರ, ತಿಮ್ಮಗಾನಹಳ್ಳಿ, ನಗರಗೆರೆ ಪರಿಸರದಲ್ಲಿ ಜಾಹೀರಾತಿನ ಪ್ರಕಟಣೆಯನ್ನು ಏರು ಧ್ವನಿಯಲ್ಲಿ ಕೂಗಿ ಹೇಳಿರುತ್ತೇನೆ, ಆಪಾದಿತ ಶ್ರೀನಿವಾಸ ಎನ್ ಸಿ ಈತನ ಸುಳಿವು ಕಂಡುಬಂದಲ್ಲಿ ಠಾಣೆಗೆ ಮಾಹಿತಿ ತಿಳಿಸಬೇಕೆಂದು ದೂರವಾಣಿ ಸಂಖ್ಯೆಯನ್ನು ನೀಡಿರುತ್ತೇನೆ, ಸದ್ರಿ ಮಹಜರನ್ನು ದಿಃ **18.09.2022** ರಂದು **15.30** ಗಂಟೆಯಿಂದ **16.30** ಗಂಟೆಯವರೆಗೆ ಸ್ಥಳದಲ್ಲಿ ಬರೆಯಲಾಯಿತು, ಸ್ಥಳೀಯರಾದ ಮಂಜು ಮತ್ತು ಪರಮೇಶ್ವರ ಅವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದ್ರಿ ಇಸ್ತಿಹಾರಿನ ಪ್ರತಿ ಎಂದು ಗುರುತಿಸಿದ್ದು ನಿ.ಪಿ-**7**, ಮಹಜರು ಎಂದು ಗುರುತಿಸಿದ್ದು ಅದನ್ನು ನಿ.ಪಿ-**8**, ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ-**8**(ಎ) ಎಂದು ಗುರುತಿಸಲಾಯಿತು.

ದ.ಪ್ರ.ಸಂ ಕಲಂ **299** ರಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಂಡಿದ್ದರಿಂದ ಪಾಟೀಸವಾಲು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು)

ಓ. ಹೇ ಕೇ ಸ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಉಡುಪಿ